**<u>ಅಸಲು ದಾವಾ ಸಂಖ್ಯೆ: - 242/2021</u>** **ಪಿ.ಡಬ್ಲ್ಯೂ:-1**

ದಿನಾಂಕಃ **25.04.2024** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು:- ಪ್ರತಿವಾದಿ ಪರ ಶ್ರೀ.ಕೆಎಸ್‌ಕೆ ವಕೀಲರಿಂದಃ-</u>

ನಾನು ಪಿಯುಸಿವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಜಮೀನಿನ ವಿಚಾರವಾಗಿ ದಾವೆಯನ್ನು ಹಾಕಿರುತ್ತೇನೆ. ನನಗೆ ದಾವೆಯ ಸಂಪೂರ್ಣ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ಹಾಕಿರುವ ತಕರಾರನ್ನು ತಿಳಿದುಕೊಂಡಿರುವುದಿಲ್ಲ. ನನ್ನ ಅಜ್ಜ ಕರಿಯಪ್ಪ ಅಜ್ಜಿ ಕರಿಯಮ್ಮ ಇವರಿಗೆ ಒಟ್ಟು ಮೂರು ಜನ ಗಂಡು ಮಕ್ಕಳು. 1. ಮಂಜಪ್ಪ, 2.ತಿಮ್ಮಪ್ಪ ಮತ್ತು 3. ಹನುಮಂತಪ್ಪ. ಎಲ್ಲಾ ದಾವಾ ಸ್ವತ್ತುಗಳು ಒಟ್ಟು ಕುಟುಂಬದ ಸ್ವತ್ತುಗಳಾಗಿರುತ್ತವೆ. ಇದಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು 2 ಸ್ವತ್ತುಗಳಿಗೆ ಸಂಬಂಧಿಸಿದಂತೆ ದಾವೆ ಹಾಕಿರುತ್ತೇನೆ. ದಾವಾ ಸ್ವತ್ತು ಸರ್ವೆ ನಂ.45/1 ರಲ್ಲಿ 2 ಎಕರೆ 35 ಗುಂಟೆ ಜಮೀನು ಮತ್ತು ದಾವಾ ಸ್ವತ್ತು 2 ರ ಸರ್ವೆ ನಂ.46/2 ರಲ್ಲಿ 2 ಎಕರೆ 28 ಗುಂಟೆ ಜಮೀನು ಇರುತ್ತದೆ. ಸುಮಾರು 30 ವರ್ಷಗಳಿಂದ ನಾವು ಮತ್ತು ಪ್ರತಿವಾದಿಗಳು ಬೇರೆ ಬೇರೆ ವಾಸಿಸುತ್ತಿದ್ದೇವೆ ಎಂದರೆ ಸಾಕ್ಷಿಯು ಜೀವನ ಬೇರೆ ಬೇರೆ ಮಾಡುತ್ತಿದ್ದೇವೆ ಆದರೆ ಜಮೀನು ಒಟ್ಟಿಗೆ ಇದೆ ಎಂದು ನುಡಿಯುತ್ತಾರೆ. ಎಲ್ಲರೂ ಅವರವರ ಸ್ವಂತ ಮನೆಗಳಲ್ಲಿ ವಾಸ ಮಾಡುತ್ತಿದ್ದಾರೆ. ಸದರಿ ಮನೆಗಳನ್ನು ನಾನು ಈ ದಾವೆಯಲ್ಲಿ ಸೇರಿಸಿಲ್ಲ. ದಾವಾ ಸ್ವತ್ತು 1 ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ. ದಾವಾ ಹಾಕುವ 2 ತಿಂಗಳ ಮುಂಚೆ ನಾನು ಪ್ರತಿವಾದಿಗಳನ್ನು ಭಾಗಕ್ಕಾಗಿ ಕೇಳಿಕೊಂಡಿರುತ್ತೇನೆ. ನಾನು ಭಾಗ ಕೇಳುವ ಸಮಯದಲ್ಲಿ ನಮ್ಮ ತಾಯಿ 1 ನೇ ವಾದಿ ಜೀವಂತವಿದ್ದರು. ಭಾಗಕ್ಕಾಗಿ ಪ್ರತಿವಾದಿಗಳನ್ನು ನಾನೇ ಕೇಳಿಕೊಂಡಿರುತ್ತೇನೆ. 2 ನೇ ದಾವಾ ಸ್ವತ್ತು ಸರ್ವೆ ನಂ.46/2 ನ್ನು 1 ನೇ ಪ್ರತಿವಾದಿ ಮತ್ತು 2 ನೇ ಪ್ರತಿವಾದಿಯ ಗಂಡ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಮುಂದುವರೆದು ಸಾಕ್ಷಿಯು ಅದು ನಮ್ಮ ಅಜ್ಜಿಯು ಕೊಟ್ಟ ಆಸ್ತಿ ಆಗಿರುತ್ತದೆ ಎಂದು ನುಡಿಯುತ್ತಾರೆ. ದಿಃ 23.12.1972 ರಲ್ಲಿ 2 ನೇ ದಾವಾ ಸ್ವತ್ತನ್ನು ಎಸ್.ಆರ್.ನಂ.1640/1972-73 ರಂತೆ 1 ಪ್ರತಿವಾದಿ ಮತ್ತು 2 ನೇ

ಪ್ರತಿವಾದಿಯ ಗಂಡ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು 2 ದಾವಾ ಸ್ವತ್ತುಗಳಲ್ಲೂ ಕೂಡ ಭಾಗ ಮಾಡಿಕೊಂಡು ಉಳುಮೆ ಮಾಡುತ್ತಿರುತ್ತೇನೆ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

ಸಾ. ಹೇ. ತೆ. ನ್ಯಾ ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಹೊನ್ನಾಳಿ.**